1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 1504 /2023 ಚಾಸಾಃ(5) ಪ್ರಾಸಾ (4 )

ದಿನಾಂಕಃ **24-03-2026** ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮಾರುತಿ |
| ತಂದೆ ಹೆಸರು | ಚನ್ನಬಸಪ್ಪ ಹೂಗಾರ |
| ವಯಸ್ಸು | 42 ವರ್ಷ, |
| ಉದ್ಯೋಗ | ಪೇಂಟಿಂಗ ಕೆಲಸ |
| ವಾಸಸ್ಥಳ | ಚುಕ್ಕನಕಲ್ಲ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ಮೃತ ರಂಜಿತ ಹೇಗೆ ಮೃತ ಹೊಂದಿರುತ್ತಾಳೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ. ಚಾಸಾ-1 ರವರು ನಿಪಿ-1 ರಂತೆ ದೂರು ದಾಖಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಸದರಿ ದಾಖಲಾತಿ ದೂರು ಆಗಿದ್ದು ಅದರಲ್ಲಿನ ತಮ್ಮ ಸಹಿ ನೋಡಿ ಗುರುತಿಸಿದ್ದು ಅದು ದಸ್ತೂರ ಎಂದು ಸಹಿಮಾಡಿದ್ದು ದೂರನ್ನು ಈಗಾಗಲೇ ನಿಪಿ-1 ಎಂದು ಸಾಕ್ಷಿ ಸಹಿ ನಿಪಿ-1(ಬಿ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಯಾವುದೇಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರ ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಅಂತ ಹಿಸಸಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು, ಪಾಟೀಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ 19-3-2023 ರಂದು ಸಂಜೆ 6 ಕ್ಕೆ ಚಾಸಾ-1 ರವರು ಮನೆಯಲ್ಲಿದ್ದಾಗ ಚಾಸಾ-3 ಅವರಿಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದೆನೆಂದರೆ ಸಾಯಂಕಾಲ 5-30 ಕ್ಕೆ ಚಾಸಾ-3, 4 ಮತ್ತು ಮೃತ ರಂಜಿತಾ ಮೂವರು ಸೇರಿಕೊಂಡು ಕೊಪ್ಪಳದಿಂದ ಮುದ್ದಾಬಳ್ಳಿಗೆ ಹೋಗುವ ರಸ್ತೆಯಲ್ಲಿ ಅಟೋ ಕಾಯುತ್ತಾ ನಿಂತಿದ್ದಾಗ ಆಗ ಕೆಎ-37/ಬಿ-5274 ಪಾಸೆಂಜರ ಅಟೋದಲ್ಲಿ ಸದರಿ 3 ಜನ ಹತ್ತಿಕೊಂಡು ಸ್ವಲ್ಪ ದೂರ ಬಂದಾಗ ಆರೋಪಿ ಸದರಿ ಅಟೋವನ್ನು ಅತೀವೇಗ ಮತ್ತ ಅಜಾಗರೂಕತೆಯಿಂದ ತಗ್ಗುದಿಣ್ಣೆ ನೋಡದೇ ಚಲಾಯಿಸಿದ್ದರಿಂದ ನಿಧಾನವಾಗಿ ಚಲಾಯಿಸಿ ಎಂದು ಹೇಳಿದರೂ ಕೇಳದೇ ಅತೀವೇಗವಾಗಿ ಅಟೋವನ್ನು ಚಲಾಯಿಸಿದ್ದು ಮೃತ ನನ್ನ ಹೆಂಡತಿ ಆಯತಪ್ಪಿ ಪುಟಿದ್ದು ಕೆಳಗೆ ಬಿದ್ದಿದ್ದು ಚಾಸಾ-3 ರವರು ನೋಡಿ ನನಗೆ ತಿಳಿಸಿದ್ದು ನಾನು ಸ್ಥಳಕ್ಕೆ ಬಂದೆ ಅಂದರೆ ಸರಿಯಲ್ಲ. ದಿಃ 22-3-2023 ರಂದು ಸಂಜೆ 6 ಗಂಟೆಗೆ ಚಿಕಿತ್ಸೆ ಫಲಿಸದೇ ರಂಜಿತಾ ಮೃತಪಟ್ಟಿರುತ್ತಾಳೆ ಅಂದರೆ

ಸರಿಯಲ್ಲ. ದಿಃ 23-3-2023 ರಂದು ನಿಪಿ-1 ರಂತೆ ದೂರು ದಾಖಲಿಸಿದ್ದು ಸದರಿ ದೂರನ್ನು ನಾನೇ ಬರೆದಿರುತ್ತೇನೆಂದರೆ ಸರಿಯಲ್ಲ.ಸಾಕ್ಷಿ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ಸದರಿ ಪ್ರಕರಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗಳಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ</u>**

ಏನೂ ಇಲ್ಲ.

**ಮರು ವಿಚಾರಣೆ ಇಲ್ಲ.**

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ**

1 ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.